# ಶ್ರೀ ಮೋಹನದಾಸಾರ್ಯ ವಿರಚಿತ

## ಪಂಚಭೇದ ತಾರತಮ್ಯ ಸುಳಾದಿ
## ( ಪಂಚಭೇದ ತಾರತಮ್ಯ , ಹರಿಭಕ್ತರಿಗೆ ಪಾಪಫಲ ಬಾರದು ಇತ್ಯಾದಿ ವಿಷಯ )

ರಾಗ ಹಂಸಧ್ವನಿ

ಧ್ರುವತಾಳ

ಹರಿಯೇ ಸರ್ವೋತ್ತಮ ಸಿರಿಯು ಆತನ ರಾಣಿ
ಸರಸಿಜೋದ್ಭವ ಮರುತ ಪುತ್ರರಯ್ಯಾ
ಸರಸ್ವತಿ ಭಾರತಿ ಗರುಡ ಶೇಷ ರುದ್ರ
ಹರಿಯ ರಾಣಿಯರು ನಾಲ್ಕೆರಡು ಮಂದಿ ಸೌ -
ಪರಣಿ ವಾರುಣಿ ಗಿರಿಜಾ ಸುರಪತಿಕಾಮಾದ್ಯರ
ತಾರತಮ್ಯ ಜ್ಞಾನದಿಂದ ತಿಳಿಯಬೇಕು
ಸುರನದಿಪಿತ ನಮ್ಮ ಮೋಹನವಿಟ್ಠಲ
ಶರಣು ನೆನಿಸಿದವಗೆ ಇನ್ನು ಸರಿಯು ಕಾಣೆ ॥ **1** ॥

ಮಟ್ಟತಾಳ

ಜೀವ ಜೀವಕೆ ಭೇದ ಜಡಜಡಕೆ ಭೇದ
ಜೀವ ಜಡಕೆ ಭೇದ ಹರಿಗೆ ಜಡಕೆ ಭೇದ
ಜೀವ ಈಶಗೆ ಭೇದ ದೇವ ನಾರಾಯಣನ
ಭಾವಕ್ರಿಯಗಳಿಗೆ ಅಭೇದವನ್ನು ತಿಳಿದು
ಶ್ರೀವಲ್ಲಭ ನಮ್ಮ ಮೋಹನ್ನವಿಟ್ಠಲನ್ನ
ಪಾವನ ಚರಣನಾಮ ತೀವ್ರದಲಿ ಭಜಿಸು ॥ **2** ॥

ತ್ರಿಪುಟತಾಳ

ಹರಿಯು ತನಗೆ ಬೇಕಾದವನ ಮನಸು
ಎರಗೀಸಲೀಸನು ಅನ್ಯ ಸತಿಯರಲ್ಲಿ
ಎರಗಿಸಿದರೆ ಬೇಗ ತಿರಿಗಿಸುವನಯ್ಯಾ
ತಿರುಗಿಸದಿದ್ದರೆ ಬೆರೆಯಲೀಸಾ
ಬೆರೆದರೆ ಬೆರೆಯಲಿ ರತಿಯ ಪುಟ್ಟಲೀಸಾ
ರತಿ ಪುಟ್ಟಿದರೆ ಏನು ಕಾಕು ಮಾಡಲಿಸನಯ್ಯಾ
ಕರುಣಾಸಾಗರ ನಮ್ಮ ಮೋಹನ್ನವಿಟ್ಠಲನ
ಪಾವನ ಚರಣವನು ತೀವ್ರದಲಿ ಭಜಿಸೊ ॥ **3** ॥

ಅಟ್ಟತಾಳ

ಮರುತ ಮತವ ಪೊಂದಿ ಹರಿಯೆ ಪರನೆಂದು
ಗುರು ಹಿರಿಯರ ಚರಣಕ್ಕೆರಗು ಆವಾಗಲೂ
ಹರಿಕಥಾಮೃತವ ಕರ್ಣದಿಂದಲಿ ಕೇಳು
ಹರಿ ನಿರ್ಮಾಲ್ಯವ ಶಿರದಲ್ಲಿ ಧರಿಸುತಿರು
ಹರಿ ನೈವೇದ್ಯವ ಹರುಷದಲ್ಲಿ ಭುಂಜಿಸು
ಹರಿದಾಸರ ಕೂಡ ತಿರುಗು ಊಳಿಗನಂತೆ
ಹರಿ ಅವತಾರ ಸಿರಿ ಮೋಹನ್ನವಿಟ್ಠಲ
ಹರಿಯೆ ತ್ರಿಭುವನ ಧೊರೆಯೆಂದು ತಿಳಿಯೊ ॥ **4** ॥

ಆದಿತಾಳ

ತನಗೆ ಬೇಕಾದವನು ಉನ್ನತ ಪಾಪವ ಮಾಡೆ
ದಾನವರಿಗೆ ಕೊಡಿಸಿ ಪುಣ್ಯ ಭಕ್ತರಿಗೀವ
ಘನ್ನ ಮಹಿಮ ಲಕುಮಿಯನ್ನು ಬಿಟ್ಟರೇನು ಪ್ರ -
ಪನ್ನರ ಬಿಡೆನೆಂಬ ಚಿನ್ಮಯ ಮೂರುತಿ
ಪನ್ನಗಾದ್ರಿ ನಿಲಯ ಮೋಹನ್ನವಿಟ್ಠಲನ್ನ
ಸನ್ನುತಿಸುವನಿಗೆ ಇನ್ನು ಸರಿಯು ಕಾಣೆ ॥ **5** ॥

ಜತೆ

ತಾರತಮ್ಯ ಪಂಚಭೇದ ತಿಳಿಯದವಗೆ
ಮಾರುತಿಪ್ರೀಯ ಮೋಹನ್ನವಿಟ್ಠಲ ಪೊಲಿಯಾ ॥

ಶ್ರೀ ಮೋಹನದಾಸಾರ್ಯ ವಿರಚಿತ

ಸಾಧನಾ ವಿಚಾರ ಸುಳಾದಿ

ರಾಗ ಕಾನಡ

ಧ್ರುವತಾಳ

ಹರಿದಾಸನು ನಾನಲ್ಲ ಹರಿ ಭಕುತಿ ಎನಗಿಲ್ಲ
ಧರೆಯೊಳು ಒಂದು ವೇಷವ ಧರಿಸಿ ತಿರುಗುವೆನು ನಾನು ತರುಣಿ ಮಕ್ಕಳು ಸಹೋದರ ಮೊದಲಾದವರ
ಪೊರೆವೆನೆನುತ ಡಂಭ ವಿರಚಿಸಿ ಶರಣನೆಂತೆಂದು ಕರೆಸಿಕೊಂಬೆನೊ ಬಹಿರದಲ್ಲಿ ಅನ್ಯರಿಂದಲೆ
ಸಿರಿಪತಿ ನಿನ್ನ ಪಾದ ಸ್ಮರಿಸದಲೆ
ಪರಮ ದಯಾಳು ಮೋಹನ್ನವಿಟ್ಠಲರೇಯಾ

ಕರಣ ಶುದ್ಧನಾಗದೆ ತಿರುಗಿದೆ ಪೊಟ್ಟೆಗಾಗಿ ॥ **1** ॥

ಮಟ್ಟತಾಳ

ದೇಶ ದೇಶಕೆ ಧನದ ಆಶೆಗಾಗಿ ಪೋಗಿ
ಕಾಶಿಗ್ಹೋಗುವೆನೆಂದು ಕಾಸು ಹಣವ ತಂದು
ಈ ಸಂಸಾರಕ್ಕೆ ನಾ ಸಮರ್ಪಿಸಿ
ತೋಷ ಪಡುವೆ ದುರಿತರಾಸಿಯಂದರಿಯದಲೆ
ಭೂಸುರರು ಎನ್ನ ವಾಸದಲ್ಲಿಗೆ ಬರಲು
ಗ್ರಾಸವೀಯದೆ ಅಪಹಾಸ ಮಾಡುವೇನು
ದೋಷವರ್ಜಿತ ನಮ್ಮ ಮೋಹನ್ನವಿಟ್ಠಲ
ಘಾಸಿಯಾದೆನೊ ಯಮಪಾಶಕ್ಕೆ ಗುರಿಯಾಗಿ ॥ **2** ॥

ತ್ರಿವಿಡಿತಾಳ

ವಿತ್ತವಿದ್ದವನ ಮನಿಯೊಳು ಪೋಗಿ ಕುಳಿತು ಬಲು
ಉತ್ತಮನೆಂದವನ ಸ್ತೋತ್ರವ ಮಾಡಿ
ಹತ್ತೆಂಟು ಪುಸಿ ವಾರ್ತೆ ಪೇಳೆ ಅವನು ಈ
ಹೊತ್ತು ಬನ್ನಿರಿ ಎನ್ನೆ ಹರುಷದಿಂದ
ಹತ್ತೈದು ದೇವತಾರ್ಚನೆಯ ಸಾಮಗ್ರೀಯ
ತತ್ವಳಿಸುವಂತೆ ವಿರಚಿಸುವೆ
ಸುತ್ತ ಧೂಪ ದೀಪವೆತ್ತಿ ನೈವೇದ್ಯವ
ಹತ್ತಿಲಿರಿಸಿಕೊಂಡು ಮುಸುಕು ಇಟ್ಟು
ಚಿತ್ತ ಶುದ್ಧಿಯಿಲ್ಲದಲೆ ಬಹಿರದಲ್ಲಿ ಕರ -
ವೆತ್ತಿ ಪಿಟಿ ಪಿಟಿ ಎಂದು ತುತಿಸುವೆನೊ
ಮತ್ತೇನು ಮಂತ್ರ ತಂತ್ರವು ಬಾರದೆನ್ನೆ
ಹತ್ತೀಲಿ ಸೇರಲೀಸನೋ ಸ್ವೋತ್ತುಮರ
ಎತ್ತ ನೋಡಲು ಎನ್ನ ಹತ್ತಿಲಿ ಹೊದ್ದಿದವರು
ಮುತ್ತಿಕೊಂಡು ಕಾಗೆ ಬಳಗದಂತೆ
ಚಿತ್ತಜನಯ್ಯಾ ಮೋಹನವಿಟ್ಠಲ ನಿನ್ನ
ಭೃತ್ಯನೆನಿಸಿ ಸ್ವಸ್ಥ ಚಿತ್ತದಿಂದಿರದ್ಹೋದೆ ॥ **3** ॥

ಅಟ್ಟತಾಳ

ಕಾಮ ಕ್ರೋಧ ಲೋಭ ಮದ ಮತ್ಸರಂಗಳು
ರೋಮ ರೋಮ ಕೂಪದೊಳು ತುಂಬಿಕೊಂಡು
ಭೂಮಿ ಸುರ ದೇಹ ಬಂದೀಹದೆಂತೆಂಬ
ಈ ಮಹಾ ಗರ್ವದಿಂದಾಡುವೆ ಸುಜನರ
ಶ್ರೀಮನೋಹರ ನಿನ್ನ ತಾಮರಸಾಂಘ್ರಿ ನಿ -

ಷ್ಕಾಮದಿಂದಲಿ ಭಜಿಸಿ ಮರೆ ಪೋಗಲಿಲ್ಲವೊ
ಭೂಮಿ ಭಾರಕನಾಗಿ ತನುವ ಪೊರೆದೆ ನಿನ್ನ
ನಾಮಾಮೃತವನು ಪ್ರೇಮದಿ ಸವಿಯದೆ
ಸಾಮಜವರದ ಮೋಹನ್ನವಿಟ್ಠಲ ಅ -
ನಾಮಧೇಯನಾದ ಪಾಮರರೊಡಗೂಡಿ ॥ **4** ॥

ಆದಿತಾಳ

ಅನ್ಯರ ಪದಾರ್ಥವ ತಂದು ನಿನ್ನ ಮುಂದೆ ಸಮರ್ಪಿಸಲು ಎನಗೇನು ಬರುವದೊ ಬಲು ಪುಣ್ಯ ಅದರಿಂದ
ತನ್ನ ಕರದಿಂದಲಿ ಉದಕವನ್ನು ತಂದು ತುಲಸಿಯಿಂದ
ನಿನ್ನ ಪೂಜೆ ಮಾಡಲು ಪ್ರಸನ್ನನಾಗಿ ಪಾಲಿಸುವಿ
ಮುನ್ನೆ ಒಬ್ಬ ಕುಚೇಲಂಗೆ ಮನ್ನಿಸಿ ಪದವಿಯನಿತ್ತೆ
ನಿನ್ನ ಮಹಿಮೆ ಎಣಿಪರಾರೊ
ಘನ್ನ ಮಹಿಮ ಮೋಹನ್ನವಿಟ್ಠಲರೇಯಾ
ಅನ್ಯರಲಿ ಪೋಗಿ ಪಾಪ ಕೊಂಡು ಬರುವೆನೊ ॥ **5** ॥

ಜತೆ

ಕೆರೆ ನೀರು ಕೆರೆಗೆ ಚೆಲ್ಲಿ ವರಗಳು ಪಡೆದಂತೆ
ಕರುಣಾಳು ಮೋಹನ್ನವಿಟ್ಠಲನರ್ಚಿಸು ಮನವೆ ॥

ಶ್ರೀ ಮೋಹನದಾಸಾರ್ಯ ವಿರಚಿತ

ಶ್ರೀಹರಿಪಾದ ಪ್ರಾರ್ಥನಾ ಸುಳಾದಿ
**(** ಇಂದ್ರಿಯಗಳ ದುರ್ವ್ಯಾಪಾರ ಬಿಡಿಸಿ **,** ಹರಿಪಾದದಿ ರತಿ ಕೊಡಲು ಪ್ರಾರ್ಥನೆ **)**

ರಾಗ ಕಾಂಬೋಧಿ

ಧ್ರುವತಾಳ

ಶ್ರೋತುರ ನಿನ್ನ ಕತೆ ಕೇಳಲೊಲ್ಲದು ಪರ -
ಮಾತುರದಿಂದ ದುರ್ವಾರ್ತಿ ಕೇಳುತಲಿದೆ
ನೇತುರ ನಿನ್ನ ಮೂರ್ತಿಯ ನೋಡದಲೆ ಗಾಡಿ -
ಕಾರ್ತಿಯರನು ಮನದಣಿಯ ನೋಡುತಲಿದೆ
ಗಾತುರ ನಿನ್ನ ದಾಸರನಪ್ಪದೆ ಕಾ -
ಮಾತುರದಿಂದ ಕಂಡವರನಪ್ಪುತಲಿದೆ
ಪೂತ ಪದಾರ್ಥವ ಭುಂಜಿಸದಲೆ ಜಿಂಹ್ವೆ
ಪಾತಕರ ದುಷ್ಟನ್ನ ಕೊಳುತಲಿದೆ

ಶ್ರೀತುಳಸೀ ಆಘ್ರಾಣಿಸದಲೆ ಮೂಗು
ಬಾತಿ ಬಸಿದ ಕೂಗಂಧ ಕೋಡುತಲಿದೆ
ಯಾತರಿಂದಲಿ ನಿನ್ನ ಮನಕೆ ಬಪ್ಪೆನೆ ದೇವ
ಕೋತಿ ಕೊರವಂಗೆ ಸಿಲ್ಕಿದಂತಾಯಿತು
ಜ್ಯೋತಿರ್ಮಯ ನಮ್ಮ ಮೋಹನ್ನವಿಟ್ಠಲ ಬೆ -
ನ್ನಾತು ಸಲಹದಿರೆ ಗತಿ ಯಾವುದು ಎನಗೆ ॥ **1** ॥

ಮಟ್ಟತಾಳ

ಸಂಸಾರವೆಂತೆಂಬೊ ಸಾಗರದೊಳು ಸಿಲ್ಕಿ
ಹಿಂಸೆ ಬಡುತ ತೇಲಿ ಮುಳುಗುವವನ ಕಂಡು
ಕಂಸಾರಿ ನೀ ಕೈಯ ಆನದಿದ್ದರೆ ಇನ್ನು ಕಡೆ ಹಾಯುವದೆಂತೊ
ಹಂಸವಾಹನನ್ನೈಯ್ಯಾ ಮೋಹನ್ನವಿಟ್ಠಲ
ಸಂಶಯವೆಂತೆಂಬೊ ಸುಳಿಯೊಳು ಶಿಲ್ಕಿದನ
ಕಡೆ ಹಾಯುವದೆಂತೊ ಕಡೆ ಹಾಯುವದೆಂತೊ ॥ **2** ॥

ತ್ರಿವಿಡಿತಾಳ

ವಾಕು ನಿನ್ನನು ಕೊಂಡಾಡಲೊಲ್ಲದೆ ಕೆಟ್ಟ
ಕಾಕು ಪೋಕರ ಕೂಡ ಕೆಲದಾಡುತಲಿದೆ
ಬೇಕೆಂದು ನಿನ್ನ ಪೂಜೆಯ ಮಾಡದಲೆ ಪಾಣಿ
ಕೂಕರ್ಮಕೊಳಗಾಗಿ ಭ್ರಷ್ಟ ಮಾಡುತಲಿದೆ
ಶ್ರೀಕಾಂತನ ಯಾತ್ರೆ ಮಾಡಲೊಲ್ಲದು ಪಾದ
ಬೇಕೆಂದು ಧನದಾಶೆಗೆ ತುಕ್ಕುತಲಿದೆ
ನೀ ಕೇಳೊ ಎರಡೈದೇಂದ್ರಿಯ ವ್ಯಾಪಾರ
ವಾಕಾಮಗೋಚರ ವಶವಾಗದು ಎನಗೆ
ಕಾಕೋದರ ಶಾಯಿ ಮೋಹನ್ನವಿಟ್ಠಲ
ನೀ ಕೈಯ್ಯ ಹಿಡಿಯದಿರೆ ಗತಿ ಯಾವುದೆನಗೆ ॥ **3** ॥

ಅಟ್ಟತಾಳ

ಪಂಚ ಜ್ಞಾನೇಂದ್ರಿಯ ಪಂಚ ಕರ್ಮೇಂದ್ರಿಯ
ಪಂಚಭೂತ ಪಂಚ ತನ್ಮಾತ್ರೆಗಳು ಪ್ರ -
ಪಂಚಕ ಎಳದೊಯ್ದು ಘಾತಿಸುತಲಿವೆ
ಪಂಚಬಾಣನ್ನೈಯ್ಯ ಪಂಚಪ್ರಾಣಪ್ರೀಯ
ಪಂಚ ಪಾಂಡವಪಾಲ ಪಾಂಚಾಲಿ ವರದನೆ
ಪಂಚ ರೂಪಾತ್ಮಕ ಮೋಹನ್ನವಿಟ್ಠಲ
ಮಿಂಚಿನಂದದಿ ಪೊಳೆಯೋ ದೋಷವ ಕಳೆಯೋ ॥ **4** ॥

ಆದಿತಾಳ

ವೇದಶಾಸ್ತ್ರವ ಸಾಧು ಪುರಾಣ
ಓದಿದವನಲ್ಲ ಕೇಳಿದವನಲ್ಲ
ಮಾಧವನ ಪೂಜಿ ಮಾಡಿದವನಲ್ಲ
ವಾದಿಸುವೆ ಕುತರ್ಕವನು ಮಾಡಿ
ಬೋಧ ಮೂರುತಿ ನಮ್ಮ ಮೋಹನ್ನವಿಟ್ಠಲ
ನೀ ದಯದಿ ಕೈ ಪಿಡಿಯದೆಂತೊ ॥ **5** ॥

ಜತೆ

ತನುವೆ ತೀರಲಿ ನಿಚ್ಚಾ ಗುಣವೆ ತೀರಲಿ ಎನ್ನ
ಮನ ನಿನ್ನಂಘ್ರಿಯಲಿಡೊ ಮೋಹನ್ನವಿಟ್ಠಲ ॥